ಅನ್ನುವಷ್ಟರಲ್ಲಿ ಅವನ ಕೈಮುರಿದು ಮೂಲೆಗೆ ಕೂರಿಸಿದ್ದಳು ಅಮ್ಮು. ಇದಿಷ್ಟು ಮುರುಗ ಪುರಾಣ, ವೆಂಕಟಸ್ವಾಮಿಯ ಜೊತೆಗಿನ ಮಾತುಕತೆಯಲ್ಲಿ ತಿಳಿದುಬಂದಿತ್ತು. ಆದರೆ ಸ್ವಲ್ಪದರಲ್ಲೇ ಮುರುಗನ್‌ಗೆ ಒಂದು ಸುವರ್ಣಾವಕಾಶ ಬಂದಿತ್ತು.

ಅಮ್ಮು ಅದ್ಯಾವುದೋ ಒಂದು ದೀರ್ಘ ಔಟ್‌ಡೋರ್ ಶೂಟಿಂಗ್ ಶೆಡ್ಯೂಲ್‌ನ ಗಡಿಬಿಡಿಯಲ್ಲಿದ್ದಾಗ ಜಯಂತನ ಫ್ಯಾಕ್ಟರಿಗೆ ಒಂದು ಅತಿ ದೊಡ್ಡ ಕೆಲಸದ ಆರ್ಡರ್ ಬಂದಿತ್ತು. ಅದನ್ನು ತನ್ನ ಖಾಸಾ ಫ್ಯಾಕ್ಟರಿಗೆ ವರ್ಗಾಯಿಸಲು ಒಂದು ತೊಡಕಿತ್ತು. ಅದಕ್ಕೆ ಸುಮಾರು ಇಪ್ಪತ್ತು ಲಕ್ಷದಷ್ಟು ದುಬಾರಿ ಬೆಲೆಯ ಮಿಶ್ರಲೋಹದ ಕಚ್ಚಾವಸ್ತುವನ್ನು ಬಂಡವಾಳವಾಗಿ, ಮೊದಲಿಗೆ ತಾವೇ ಖರೀದಿಸಬೇಕಿತ್ತು. ಈ ತೊಡಕನ್ನು ನಿವಾರಿಸಿಕೊಳ್ಳುವಂತೆ ಅದಕ್ಕೊಂದು ಪರಿಹಾರವನ್ನೂ ಹುಡುಕಿದ್ದ ಮುರುಗನ್. ಮೊದಲಿಗೆ ಜಯಂತನ ಫ್ಯಾಕ್ಟರಿಯ ಹೆಸರಲ್ಲೇ ಆ ಕೆಲಸವನ್ನು ಪಡೆದು ನಂತರ ಅದು ಅಲ್ಲಿ ಆಗದ ಹಾಗೆ ಮಾಡಿ ನಂತರ ಆ ಕೆಲಸ ತನ್ನ ಖಾಸಾ ಫ್ಯಾಕ್ಟರಿಗೆ ಬರುವಂತೆ ಮಾಡಿಕೊಳ್ಳುವುದೆಂದು. ಅಮಾಯಕ ಜಯಂತನಿಗೆ ಇದ್ಯಾವುದೂ ಅರ್ಥವಾಗದೆ ಮುರುಗನ್‌ಗೆ ಈ ಪ್ರಾಜೆಕ್ಟಿನ ಪೂರ್ತಿ ಜವಾಬ್ದಾರಿ ಒಪ್ಪಿಸಿದ್ದ. ಇದರ ನಿಮಿತ್ತ ಲೋಹ ಮಾರುಕಟ್ಟೆಯಲ್ಲಿ ಇಪ್ಪತ್ತು ಲಕ್ಷ ಮೌಲ್ಯದ ಅಗತ್ಯ ಕಚ್ಚಾಸರಕನ್ನು ಒಮ್ಮೆಗೇ ಖರೀದಿಸಲಾಗಿತ್ತು. ಅದನ್ನು ಫ್ಯಾಕ್ಟರಿಯದೇ ಲಾರಿಯಲ್ಲಿ ತಂದು, ತಾಡಪತ್ರಿ ಬಿಗಿದು, ಫ್ಯಾಕ್ಟರಿ ಮುಂದೆ ನಿಲ್ಲಿಸಿ, ಲಾರಿ ಡ್ರೈವರ್ ಜೋಸೆಫ್ ಲಾರಿಯ ಕ್ಯಾಬಿನ್‌ನಲ್ಲೇ ಇದ್ದು, ಕಾವಲು ಕಾಯುವ ವ್ಯವಸ್ಥೆ ಮಾಡಿದ್ದ. ಅದನ್ನು ಜಯಂತನಿಗೂ ತಿಳಿಸಿದ್ದ ಮುರುಗನ್. ಆದರೆ ಅದೇ ರಾತ್ರಿ ಜರುಗಲಿದ್ದ ಮತ್ತೊಂದು ವ್ಯವಸ್ಥೆ, ಮುರುಗನ್ ಮತ್ತು ಅವನ ಬಾಮೈದ ವೇಲುಗೆ ಮಾತ್ರ ತಿಳಿದಿತ್ತು. ರಾತ್ರಿ ಹತ್ತು ಗಂಟೆ ಹೊತ್ತಿಗೆ ಜೋಸೆಫ್ ಕುಡಿದು ಮುಗಿಸಿ, ಅಲ್ಲೇ ಇದ್ದ ಒಂದು ಮೆಸ್ಸಿಗೆ ಊಟಕ್ಕೆ ಹೊರಡುವ ಟೈಮ್. ಆಗ ಸರಿಯಾಗಿ ಜೋಸೆಫ್ ಫೋನಿಗೆ ಒಂದು ಕರೆ ಬಂದಿತ್ತು, ಮುರುಗನ್ ಕಡೆಯಿಂದ. ಹೈವೇ ಟೋಲ್ ಪ್ಲಾಜಾದ ಆಚೆಗಿನ ವೇಯ್ ಬ್ರಿಡ್ಜ್‌ಗೆ ಲಾರಿ ತರಲು. ಆದರೆ ಟೋಲ್ ಪ್ಲಾಜಾ ತಲುಪುವ ಮುನ್ನವೇ ಮಾರ್ಗಮಧ್ಯದಲ್ಲಿ ಕೈ ಅಡ್ಡಹಾಕಿ ಮುರುಗನ್ ಮತ್ತು ವೇಲು ನಿಂತಿದ್ದರು. ವೇಲು, ಡ್ರೈವರ್ ಸೀಟ್ ಡೋರಿಗೆ ಬಂದು, ‘ಮುಂದೆ ಪೊಲೀಸವ್ರು ನಿಂತವ್ರೆ. ನೀನು ಡ್ರಿಂಕ್ಸ್ ಮಾಡಿದ್ದೀಯಾ, ನಾನು ಡ್ರೈವ್ ಮಾಡ್ತೀನಿ’ ಅಂತ ಸ್ಟೇರಿಂಗ್ ಹಿಡಿದಿದ್ದ. ಆ ಕಡೆ ಮುರುಗನ್ ಈ ಕಡೆ ವೇಲು, ಮಧ್ಯದಲ್ಲಿ ಜೋಸೆಫ್. ಲಾರಿ ಗೊಲ್ಲರಹಳ್ಳಿ ಕೆರೆ ಏರಿಗೆ ಬರುತ್ತಿದ್ದಂತೆ, ಲಾರಿಯನ್ನು ಪಕ್ಕಕ್ಕೆ ಹಾಕಿದ ವೇಲು, ಎಣ್ಣೆ ಮಂಪರಲ್ಲಿದ್ದ ಜೋಸೆಫ್ ಕುತ್ತಿಗೆಗೆ ಟವಲ್ ಕುಣಿಕೆ ಹಾಕಿ, ಬಾವ–ಬಾಮೈದ ಆ ಕಡೆ ಈ ಕಡೆ ಎಳೆದು ಎರಡೇ ನಿಮಿಷದಲ್ಲಿ ಏಸುವಿನ ಪಾದ ಸೇರಿಸಿಬಿಟ್ಟಿದ್ದರು. ಪಕ್ಕದ ಕೆರೆಯನ್ನು ಎಂಎಲ್‌ಎ ಸಿದ್ದಪ್ಪನ ಶಿಷ್ಯ ದಾಮೋದರ ನಾಯ್ಡು, ಕ್ಷೇತ್ರದ ಪ್ರಜೆಗಳ ವಸತಿ ಸೌಕರ್ಯಕ್ಕಾಗಿ ಲೇಔಟ್ ನಿರ್ಮಿಸಲು, ಒಂದು ಕಡೆಯಿಂದ ರಾತ್ರೋರಾತ್ರಿ ಮಣ್ಣು ತುಂಬುವ ಕೈಂಕರ್ಯದಲ್ಲಿ ತೊಡಗಿದ್ದ.

ಈ ಭಲೇ ಜೋಡಿ ಸಮಯ ನೋಡಿ, ಜೋಸೆಫನ ಕಳೇಬರದೊಡನೆ ಕೆಳಕ್ಕಿಳಿದು, ತಾವೇ ಅವನಿಗೆ ಈ ಲೇಔಟಲ್ಲಿ, ಮೂರಕ್ಕೆ ಆರರ ಒಂದು ಚಿಕ್ಕ ಸೈಟ್ ಅಲಾಟ್ ಮಾಡಿ, ಮಲಗಿಸಿ ಎರಡು ಅಡಿ ಮಣ್ಣು ಮುಚ್ಚಿದ್ದರು. ಬೆಳಿಗ್ಗೆಯಷ್ಟರಲ್ಲಿ ನಾಯ್ಡು ಕಡೆಯವರು ಅದರ ಮೇಲೆ ಇನ್ನೂ ಹದಿನೆಂಟಡಿ ಮಣ್ಣನ್ನು ತಾವೇ ತುಂಬಿದ್ದರು. ಒಟ್ಟು ಇಪ್ಪತ್ತಡಿಯ ಮಣ್ಣಿನ ಹೊದಿಕೆ. ಎಷ್ಟು ಜನಕ್ಕುಂಟು ಈ ಭಾಗ್ಯ? ಇಪ್ಪತ್ತು ಲಕ್ಷ ರೂಪಾಯಿ ಬೆಲೆಯ ಸರಕು ಹೇರಿದ್ದ ಲಾರಿ, ಟೋಲ್ ಪ್ಲಾಜಾ ಹಾದು ವೇಲ್ ಮುರುಗನ್ ಫ್ಯಾಕ್ಟರಿಗೆ ತಲುಪಿತ್ತು. ಮಾರನೆ ದಿನ ಸುದ್ದಿ ಬಿತ್ತರಿಸಲಾಯಿತು. ಹಿಂದಿನ ದಿನ ರಾತ್ರಿ ಡ್ರೈವರ್ ಜೋಸೆಫ್ ಸರಕು ತುಂಬಿದ ಲಾರಿ ಸಮೇತ ಎಸ್ಕೇಪ್ ಆಗಿದ್ದಾನೆ ಎಂದು. ಅದು ಮಾಯಣ್ಣನ ಸ್ಟೇಷನ್ನಿನ ಪಕ್ಕದ ಸ್ಟೇಷನ್ನಿನಲ್ಲಿ ಕಳವು ಕೇಸಾಗಿ ದಾಖಲಾಯಿತು. ಆ ಕೇಸು ಹಳ್ಳ ಹಿಡಿಯಲು ಏನೇನು ಮಾಡಬೇಕೊ ಅದೆಲ್ಲವನ್ನೂ ಮಾಡಿದ್ದ ಮುರುಗನ್. ಆದರೆ ಒಂದು ಎಡವಟ್ಟು ಮಾಡಿಕೊಂಡು ಅಮ್ಮು ಕೈಯಲ್ಲಿ ಸಿಕ್ಕಿಬೀಳುವುದರಲ್ಲಿದ್ದ. ಅಮ್ಮುಗೆ ಜಯಂತನ ಫ್ಯಾಕ್ಟರಿಯಲ್ಲಿನ ಅದ್ಯಾವುದೋ ಕೆಲಸಕ್ಕೆ ಮುರುಗನ್‌ನ ಆಧಾರ್ ಚೀಟಿಯ ನಕಲು ಪ್ರತಿ ಬೇಕಿತ್ತು. ಅವನು ಕೊಟ್ಟ ನಕಲು ಪ್ರತಿಯ ಮಡಿಕೆಯಲ್ಲಿ ಆ ಟೋಲ್ ಪ್ಲಾಜಾದ ರಶೀತಿಯು ಸೇರಿಕೊಂಡುಬಿಟ್ಟಿತ್ತು. ಅದರಲ್ಲಿ ಲಾರಿ ಹಾದು ಹೋದ ದಿನ, ಸಮಯ, ಲಾರಿ ನಂಬರ್ರು ಎಲ್ಲಾ ಇದ್ದು, ಅದು ಲಾರಿ ಕಳುವಾದ ದಿನ ಮತ್ತು ಸಮಯಕ್ಕೆ ಸರಿಯಾಗಿ ತಾಳೆಯಾಗುವಂತಿತ್ತು. ಆ ರಶೀತಿ ನಿಮ್ಮ ಹತ್ತಿರ ಹೇಗೆ ಬಂತು ಎಂದು ಫೋನ್ ಮಾಡಿ ಮುರುಗನ್‌ನನ್ನು ಕೇಳಿದಳು.

‘ಅದು ತನಗೆ ತಿಳಿಯದು. ಫ್ಯಾಕ್ಟರಿ ಮುಂದೆ ಬಿದ್ದಿತ್ತು. ತಮಗೆ ತಿಳಿಯಲಿ ಎಂದು ನಾನೇ ನಿಮಗೆ ಕಳಿಸಿದ್ದೇನೆ’ ಎಂದು ತಿಪ್ಪೆ ಸಾರಿಸಿದ್ದ. ಕೂಡಲೇ ಇದನ್ನು ನಿಮ್ಮ ಜಯಂತ್ ಸಾರ್‌ಗೆ ತಿಳಿಸಿ ಎಂದು, ಆ ರಶೀತಿಯ ಫೋಟೊವನ್ನು ತನ್ನ ಮೊಬೈಲಲ್ಲಿ ಹಿಡಿದು ಮುರುಗನ್ ಮೊಬೈಲಿಗೆ ಕಳಿಸಿದ್ದಳು. ನಂತರ ಅಮ್ಮು ತನ್ನ ಪರಿಚಯದ ಯಾರನ್ನೋ ಹಿಡಿದು, ಟೋಲ್ ಪ್ಲಾಜಾದಲ್ಲಿನ ಆ ದಿನ ಮತ್ತು ಸಮಯದ ಸಿಸಿಟೀವಿಯ ಫುಟ್ಟೇಜ್ ತರಿಸಿ ನೋಡಲು, ಅದರಲ್ಲಿ ಲಾರಿಯಿಂದ ಕೆಳಗಿಳಿದಿದ್ದ ವ್ಯಕ್ತಿ, ಮಸುಕು ಮಸುಕಾಗಿ ದಾಖಲಾಗಿದ್ದ. ಒಮ್ಮೆ ಎಂದೋ ಅವನು ತನ್ನನ್ನು ವೇಲು ಎಂದು ಗುರುತಿಸಿಕೊಂಡು, ಮುರುಗನ್‌ನನ್ನು ಹುಡುಕಿಕೊಂಡು ಜಯಂತನ ಫ್ಯಾಕ್ಟರಿಗೆ ಬಂದಿದ್ದಾಗ, ಅವನನ್ನು ಕಂಡಿದ್ದಳು ಅಮ್ಮು. ತನ್ನ ಸಂದೇಹವನ್ನು ಮುರುಗನ್‌ಗೆ ಹೇಳಿ, ಅದನ್ನು, ದೂರು ಕೊಟ್ಟಿದ ಪೊಲೀಸು ಠಾಣೆಗೂ ತಿಳಿಸುವಂತೆ ಹೇಳಿದ್ದಳು. ಆಗಿದ್ದೇನೆಂದರೆ ಆ ದಿನ ಟೋಲ್ ಪ್ಲಾಜಾ ದಾಟಿದ ತಕ್ಷಣ, ಲಾರಿಯನ್ನು ಪಕ್ಕದಲ್ಲಿ ನಿಲ್ಲಿಸಿ, ಪಕ್ಕದ ಗೂಡಂಗಡಿಯಲ್ಲಿ ಸಿಗರೇಟು ಕಾಫಿಗೆ ಕೆಳಗಿಳಿದಿದ್ದ ವೇಲು. ಆ ಜಾಗ ಟೋಲ್ ಪ್ಲಾಜಾದ ಸಿಸಿಟೀವಿಯ ಕಣ್ಣಳತೆಯಲ್ಲೇ ಇದ್ದು, ಅದರಲ್ಲಿ ದಾಖಲಾಗಿದ್ದ. ಅಲ್ಲಿಗೆ, ಕಳುವಾದ ಸರಕು ತುಂಬಿದ ಜಯಂತನ ಫ್ಯಾಕ್ಟರಿ ಲಾರಿ ಮತ್ತು ಅದನ್ನು ಕಳವು ಮಾಡಿದ ವ್ಯಕ್ತಿಯ ಸುಳಿವು, ಎರಡೂ ಅಮ್ಮು ಕೈಗೆ ಸಿಕ್ಕಿದಂತಾಗಿತ್ತು. ಅಡಕತ್ತರಿಗೆ ಸಿಕ್ಕಂತಾಗಿತ್ತು ಮುರುಗನ್ ಸ್ಥಿತಿ, ಆದರೆ ಒಂದೇ ಸಮಾಧಾನದ ವಿಷಯವೆಂದರೆ ಅಮ್ಮು ಮತ್ತು ಜಯಂತನ ನಡುವೆ ಮಾತು ನಿಂತುಹೋಗಿತ್ತು. ಆದ್ದರಿಂದ ಇವ್ಯಾವ ಸುದ್ದಿಯೂ ಅಮ್ಮುವನ್ನು ದಾಟಿ ಮುಂದಕ್ಕೆ ಇನ್ನೆಲ್ಲೂ ಹೋಗಿರಲಿಲ್ಲ.

ಮುರುಗನ್ ಪಾಲಿಗೆ ಮಗ್ಗುಲ ಮುಳ್ಳಾಗಿದ್ದಳು ಅಮ್ಮು. ಒಂದು– ಜಯಂತನ ಫ್ಯಾಕ್ಟರಿಯಲ್ಲಿನ ಅವನ ತುಡುಗು ಮೇವಿಗೆ ತಡೆ ಹಾಕಿದ್ದಳು. ಎರಡು– ಇವಳಿಂದ ಫ್ಯಾಕ್ಟರಿಯಲ್ಲಿ ಅವನ ಸ್ಥಾನಮಾನ ಡೋಲಾಯಮಾನವಾಗಿತ್ತು. ಮೂರು ಎಲ್ಲಕ್ಕಿಂತ ಮಿಗಿಲಾಗಿ ಈ ಕಳವು ಮತ್ತು ಜೋಸೆಫ್ ಕೊಲೆಯ ಕೇಸು, ಎರಡೂ ಸೇರಿ ತನ್ನ ಬುಡಕ್ಕೇ ಬಂದು ಕುತ್ತಿಗೆಗೆ ಸುತ್ತಿಕೊಳ್ಳುವುದು ಖಚಿತವಾಗಿತ್ತು. ತಕ್ಷಣ ಟೋಲ್ ಪ್ಲಾಜಾದ ರಶೀತಿ, ಸಿಸಿಟೀವಿಯ ಫುಟ್ಟೇಜ್, ಜೊತೆಗೆ ಅಮ್ಮು ಕೂಡ ಅದೃಶ್ಯವಾಗಬೇಕಿತ್ತು. ಬೇರೆ ಆಯ್ಕೆಯೇ ಇಲ್ಲ ಎನಿಸಿತ್ತು. ಮುರುಗನ್ ಮನಸ್ಸು ಮಾಡಿಬಿಟ್ಟಿದ್ದ ಮಾರನೆಯ ಮುಂಜಾನೆಗೆ ಅಮ್ಮುವನ್ನು ಮುಗಿಸಿಬಿಡಲು. ಸಮನಾಂತರವಾಗಿ ಇತ್ತ ಮಾಯಣ್ಣನ ಠಾಣೆಯಲ್ಲಿ ಮತ್ತೆ ಶುರುವಾಗಿತ್ತು ತನಿಖೆ. ‘ವಿನಯ್ ನಾವು ಕಲೆ ಹಾಕಿದ ಅಷ್ಟು ಸಾಕ್ಷಿ, ಪುರಾವೆ, ದಾಖಲೆಗಳಲ್ಲಿ ಮುರುಗನ್‌ಗೆ ಸಂಬಂಧಿಸಿದ್ದು ಏನಾದರೂ ಇದೆಯಾ ನೋಡಿ’

‘ಸರ್ ಆಗ ಕುಮಾರ್ ಹೇಳ್ತಿದ್ರು ಒಂದು ರಶೀತಿ ಚೀಟಿ ಹಿಂದೆ ಮುರುಗನ್ ಅಂತ ಬರೆದಿದೆ ಅಂತ. ತರಲಾ ಸಾರ್. ಅದು ಅಮ್ಮು ಅವರ ಕಾರಿನ ಗ್ಲೋವ್ ಬಾಕ್ಸಿನಲ್ಲಿ ಇತ್ತು’

‘ತನ್ನಿ, ನೋಡೋಣ’

ನೋಡಿದರೆ ಅದು ಟೋಲ್ ರಶೀತಿಯಾಗಿತ್ತು. ಗಾಡಿ ನಂಬರ್ರು ಜಯಂತನ ಫ್ಯಾಕ್ಟರಿಯ ಲಾರಿಯದಾಗಿತ್ತು. ದಿನಾಂಕ ಮತ್ತು ಸಮಯ ಆ ಇಪ್ಪತ್ತು ಲಕ್ಷ ಸರಕು ತುಂಬಿದ್ದ ಲಾರಿ ಕಳುವಾದ, ದಿನಾಂಕ ಮತ್ತು ಸಮಯಕ್ಕೆ ತಾಳೆಯಾಗಿತ್ತು. ಆದರೆ ಇದು ಅಮ್ಮುವಿನ ಬಳಿ ಹೇಗೆ ಬಂದು ಸೇರಿತು, ಎನ್ನುವ ಜಿಜ್ಞಾಸೆ ಶುರುವಾಗಿತ್ತು. ಬಹುಶಃ ಇದಕ್ಕೆ ಉತ್ತರ ಅಮ್ಮುವಿನ ಕಾಣೆಯಾಗಿದ್ದ ಮೊಬೈಲಲ್ಲಿ ಅಥವಾ ಕಳುವಾದ ದಿನದ ಟೋಲ್‌ನ ಸಿಸಿಟೀವಿ ಫುಟ್ಟೇಜಲ್ಲಿ ಸಿಗಬಹುದೆನಿಸಿ, ಆ ಟೋಲ್ ಪ್ಲಾಜಾದ ಸಿಬ್ಬಂದಿಗಳನ್ನು ಸಂಪರ್ಕಿಸಿ ಆ ಫುಟ್ಟೇಜನ್ನು ತರಿಸಿಕೊಂಡಿದ್ದ. ಸ್ಪಷ್ಟವಾಗಿ ಅದು ಜಯಂತನ ಫ್ಯಾಕ್ಟರಿಯದೇ ಲಾರಿಯಾಗಿತ್ತು, ಅಲ್ಲದೆ ಲಾರಿಯಲ್ಲಿ ಸರಕೂ ಇತ್ತು. ಮುಖ್ಯವಾಗಿ ಅಂದು ಲಾರಿಯಿಂದಿಳಿದು ಏರಿದ ವ್ಯಕ್ತಿ ಮುರುಗನ್ ಬಾಮೈದ ವೇಲು ಎಂದು ಖಚಿತವಾಗಿತ್ತು.

(ಸಶೇಷ)